ಒ.ಎಸ್.ನಂ:5/2013
ಡಿ.ಡಬ್ಲೂ.2

**ದಿ:19.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ವಾದಿ ಪರ ಶ್ರೀ.**K.B.,** ವಕೀಲರಿಂದ:-

ನಾನು ಎಸ್‌ಎಸ್‌ಎಲ್‌ಸಿಯವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಮಾಹಿತಿಯನ್ನು ನಾನೇ ಹೇಳಿ ಬರೆಸಿರುತ್ತೇನೆ . ನನಗೆ ಈ ದಾವೆಯ ವಾದಿ ಮತ್ತು ಪ್ರತಿವಾದಿಗಳು ಇಬ್ಬರು ಪರಿಚಯ ಇರುತ್ತಾರೆ . ನನ್ನ ಸ್ವಂತ ಊರು ಕಟ್ಟಿಗೆಹಳ್ಳಿ ಗ್ರಾಮ ಇರುತ್ತದೆ . ನಾನು ಕಟ್ಟಿಗೆಹಳ್ಳಿ ಗ್ರಾಮದ ಬಸವಣ್ಣ ದೇವಸ್ಥಾನದ ಅರ್ಚಕ ಇರುತ್ತೇನೆ ಎಂದರೆ ಸರಿ. ನಾನು ಅರ್ಚಕ ನಾಗಿ ಕೆಲಸ ಮಾಡುವ ಪೂರ್ವದಲ್ಲಿ ಸದರಿ ಕಟ್ಟಿಗೆಹಳ್ಳಯ್ಯ ಎಂಬುವವರು ಅರ್ಚಕರಾಗಿ ಇದ್ದರು ಹಾಗೂ ಅವರನ್ನು ದೇವಸ್ಥಾನದ ಕಮಿಟಿ ಅವರ ತಗೆದು ಹಾಕಿರುತ್ತಾರೆ ಎಂದರೆ ಸರಿ. ನಂತರ ನಾನು ಅರ್ಚಕನಾಗಿ ಸುಮಾರು **10-12** ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿ ಪಕ್ಕದಲ್ಲಿ ನಮ್ಮ ಹೋಲಕ್ಕೆ ಹೋಗುವ ರಸ್ತೆ ಇರುತ್ತದೆ **.** ದೊಡ್ಡಪ್ಪ ರವರಿಗೆ ಒಟ್ಟು **4** ಜನ ಮಕ್ಕಳು ಇರುತ್ತಾರೆ **.** ಅವರ ಹೆಸರು ಸಂಗಪ್ಪ **,** ಬಸಪ್ಪ **,** ಚನ್ನಬಸಪ್ಪ ಮತ್ತು ನಾಗಲಿಂಗಪ್ಪ ಇರುತ್ತಾರೆ **.** ವಾದಿ ಮತ್ತು ಪ್ರತಿವಾದಿಗಳಿಗೆ ಸೇರಿದ ಪಿರ್ತಾಜಿತ ಆಸ್ತಿ ಇರುತ್ತವೆ **,** ಆದರೆ ಎಷ್ಟು ವಿಸ್ತೀರ್ಣ ನನಗೆ ಗೋತ್ತಿರುವುದಿಲ್ಲ **.** ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಹಾಗೆ ವಾದಿ ಮತ್ತು ಪ್ರತಿವಾದಿಗಳು ಸುಮಾರು **60** ವರ್ಷಗಳ ಹಿಂದ ಮೌಖಿಕವಾಗಿ ಪಾಲುವಿಭಾಗದ ವಿಚಾರದ ಬಗ್ಗೆ ನನಗೆ ಗೋತ್ತಿರುವುದಿಲ್ಲ **.** ವಾದಿಗಳು ದಾವಾ ಆಸ್ತಿಯಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ **7** ರವರಿಗೆ ದಾವಾ ಆಸ್ತಿ ಹೇಗೆ ಬಂದಿರುವ ಬಗ್ಗೆ ನನಗೆ ಗೋತ್ತಿರುವುದಿಲ್ಲ **.** ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಹಾಗೆ ಪ್ರತಿವಾದಿ **7** ರವರಿಗೆ ಅವರ ತಾಯಿಯ ಕಡೆಯಿಂದ ದಾವಾ ಆಸ್ತಿ ಬಂದಿರುವ ಬಗ್ಗೆ ನನಗೆ ಗೋತ್ತಿರುವುದಿಲ್ಲ **.** ದಾವಾ ಆಸ್ತಿಯಲ್ಲಿ ಕಣ ಇದ್ದು ದೊಡ್ಡಪ್ಪ ರವರ **4** ಜನ

ಮಕ್ಕಳು ಜಂಟಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ಅವರು ಸುಮಾರು 70 ವರ್ಷದಿಂದ ಜಂಟಿ ಸ್ವಾಧೀನ ಇದ್ದು , ಅನುಭವ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ದೊಡ್ಡಪ್ಪರವರ ಮಕ್ಕಳು ತಮಗೆ ಸೇರಿದ 7 ½ ಗುಂಟೆಯನ್ನು ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಿಸಿದ ಕಂದಾಯ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ 7 ರವರು ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಕರೆದುಕೊಂಡು ಬಂದಿರುತ್ತಾರೆ . ನನಗೆ ನ್ಯಾಯಾಲಯದಿಂದ ಸಾಕ್ಷಿ ನೀಡಲು ಸಮನ್ಸ್ ಬಂದಿರುವುದಿಲ್ಲ . ವಾದಿಗಳ ತಂದೆ ಬಸಪ್ಪ ಮತ್ತು ತಾಯಿ ಸಾವಿತ್ರಮ್ಮ ಅವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ವಾದಿ ತಂದೆ ತಾಯಿ ಅವರ ಮರಣಾ ನಂತರ ಅವರ ಅಂತ್ಯ ಸಂಸ್ಕಾರವನ್ನು ದಾವಾ ಆಸ್ತಿಯಲ್ಲೀ ನೇರವೇರಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳ ತಂದೆ ಬಸಪ್ಪ ಅವರ ಮಕ್ಕಳು ದಾವಾ ಆಸ್ತಿಯಲ್ಲಿ ಮೇಕ್ಕೆ ಜೋಳ ಬೆಳದು , ಕಟ್ಟಾವು ಮಾಡಿ ಬೆಳೆಯನ್ನು ಹಾಕಿಕೊಂಡು ಇರುತ್ತಾರೆ ಎಂದರೆ ಸರಿ. ವಾದಿಗಳಿಗೆ ಸಂಬಂದಿಸಿದ ತಿಪ್ಪೇ ಮತ್ತು ಹುಣಸೆ ಮರವು ದಾವಾ ಆಸ್ತಿಯಲ್ಲಿ ಇರುತ್ತದೆ ಎಂದರೆ ಸರಿ. ವಾದಿಗಳ ದಾವಾ ಆಸ್ತಿ ಯಲ್ಲಿ ತಮಗೆ ಸೇರಿದ 7 ½ ಗುಂಟೆ ಜಮೀನ ಪೂರ್ವಕ್ಕೆ: ನಾಗಪ್ಪ ಶೇಖರಪ್ಪ ರವರ ಜಮೀನು , ಪಶ್ಚಿಮಕ್ಕೆ: ರಸ್ತೆ ಮತ್ತು ಹೆಚ್ ಜಿ ಮಂಜುನಾಥ ಜಮೀನು , ಉತ್ತರಕ್ಕೆ: ಎಂ ಸಿ ಬಸವರಾಜಪ್ಪ ರವರ ಜಮೀನು ಮತ್ತು ದಕ್ಷಿಣಕ್ಕೆ: ಸಂಗಪ್ಪರವರ ಕಣ ಇರುತ್ತದೆ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಗೆ ಸಂಬಂದಿ ಹಾಗೆ ಚೆಕ್ ಬಂದಿ ನನಗೆ ಹೇಳಲು ಬರುವುದಿಲ್ಲ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮಾಹಿತಿ ನನಗೆ ಗೊತ್ತಿಲ್ಲದಿದ್ದರು ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ **7** ರವರು ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳ ತಂದೆ ತಾಯಿ ಅಂತ್ಯಸಂಸ್ಕಾರಕ್ಕೆ ನಾನು ಹೋಗಿರುವುದಿಲ್ಲ **.** ನಾನು ಪ್ರತಿವಾದಿ 7 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು